# ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ

# (National Food Security Mission-NFSM)

ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭವಾದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ, ಹನ್ನೆರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲೂ ಮುಂದುವರೆದಿದೆ. ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದಲ್ಲಿ ಬತ್ತ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ ಒರಟು ಧಾನ್ಯಗಳು ಮತ್ತು ವಾಣಿಜ್ಯ ಬೆಳೆಗಳ ಉತ್ಪಾದನೆಯನ್ನು ಸಹ ಹೆಚ್ಚಿಸಲು ಉದ್ದೇಶಿಸಿದ್ದು, ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದಡಿ ಎನ್.ಎಫ್.ಎಸ್.ಎಂ–ಅಕ್ಕಿ ಮತ್ತು ಎನ್.ಎಫ್.ಎಸ್.ಎಂ–ದ್ವಿದಳಧಾನ್ಯ, ಎನ್.ಎಫ್.ಎಸ್.ಎಮ್–ಒರಟುಧಾನ್ಯಗಳು, ಎನ್.ಎಫ್.ಎಸ್.ಎಮ್–ವಾಣಿಜ್ಯ ಬೆಳೆಗಳು(ಹತ್ತಿ ಮತ್ತು ಕಬ್ಬು) ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗಳ ಕಾರ್ಯಕ್ಷೇತ್ರ (Area of operation) ಈ ಕೆಳಗಿನಂತಿದೆ:

| *ಕ್ರ.ಸಂ* | *ಯೋಜನೆ* | *ಅನುಷ್ಠಾನಗೊಳಿಸಬೇಕಾದ ಜಿಲ್ಲೆಗಳು* |
|---|---|---|
| 1 | ಎನ್.ಎಫ್.ಎಸ್.ಎಂ (ಅಕ್ಕಿ) | ಬೆಳಗಾಂ, ದಕ್ಷಿಣ ಕನ್ನಡ, ಹಾವೇರಿ, ಶಿವಮೊಗ್ಗ, ಉಡುಪಿ, ಉತ್ತರಕನ್ನಡ, ಯಾದಗೀರ್ |
| 2 | ಎನ್.ಎಫ್.ಎಸ್.ಎಂ (ದ್ವಿದಳಧಾನ್ಯ) | ಬಾಗಲಕೋಟೆ, ಬೆಂಗಳೂರು(ನಗರ), ಬೆಂಗಳೂರು (ಗ್ರಾ), ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಗುಲ್ಬರ್ಗಾ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ, ಯಾದಗೀರ್ |
| 3 | ಎನ್.ಎಫ್.ಎಸ್.ಎಂ (ಒರಟುಧಾನ್ಯಗಳು) | ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ಬಿಜಾಪುರ, ಚಿತ್ರದುರ್ಗ, ದಾವಣಗೆರೆ, ಗುಲ್ಬರ್ಗಾ, ಹಾವೇರಿ, ಕೊಪ್ಪಳ ರಾಯಚೂರು, ತುಮಕೂರು |
| 4 | ಎನ್.ಎಫ್.ಎಸ್.ಎಂ (ಹತ್ತಿ) | ಬೆಳಗಾಂ, ಬಳ್ಳಾರಿ, ಬಿಜಾಪುರ, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ಮೈಸೂರು, ರಾಯಚೂರು, ಉತ್ತರ ಕನ್ನಡ, ಯಾದಗೀರ್ |
| 5 | ಎನ್.ಎಫ್.ಎಸ್.ಎಂ (ಕಬ್ಬು) | ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಚಾಮರಾಜನಗರ, ದಾವಣಗೆರೆ, ಗುಲ್ಬರ್ಗಾ, ಮಂಡ್ಯ, ಮೈಸೂರು, ಶಿವಮೊಗ್ಗ, ಉತ್ತರ ಕನ್ನಡ |

**2014–15 ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಅನುಸರಿಸಬೇಕಾದ ಪ್ರಮುಖ ಘಟಕಗಳ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.**

# ಎನ್.ಎಫ್.ಎಸ್.ಎಂ(ಅಕ್ಕಿ) ಮತ್ತು (ದ್ವಿದಳ ಧಾನ್ಯಗಳು)

**ಪ್ರಾತ್ಯಕ್ಷಿಕೆಗಳು:**

- ಪ್ರತಿ ಬೆಳೆಯ ಪ್ರಾತ್ಯಕ್ಷಿಕೆಗಳನ್ನು ಕನಿಷ್ಠ 100 ಹೆ. ಪ್ರದೇಶದಲ್ಲಿ ಕೈಗೊಳ್ಳುವುದು ಹಾಗೂ ಗುಚ್ಛ ಪ್ರಾತ್ಯಕ್ಷಿಕೆಯ (Cluster Demonstrations) ಪದ್ಧತಿಯಲ್ಲಿ ಏರ್ಪಡಿಸುವುದು.
- ಪ್ರಾತ್ಯಕ್ಷಿಕೆ ಆಯೋಜನೆಯಲ್ಲಿ ಗ್ರಾಮ ಪಂಚಾಯತಿಯ ಸಹಕಾರದೊಂದಿಗೆ ಫಲಾನುಭವಿ ರೈತರನ್ನು ಆಯ್ಕೆ ಮಾಡುವುದು
- ಪ್ರಾತ್ಯಕ್ಷಿಕೆಯನ್ನು ಆಯೋಜಿಸುವಾಗ 100 ಹೆಕ್ಟೇರ್ ಪ್ರದೇಶವನ್ನು ಎರಡು ಭಾಗಗಳಾಗಿ ವಿಂಗಡಿಸಿ ಒಂದು ಭಾಗದಲ್ಲಿ ಸುಧಾರಿತ ತಾಂತ್ರಿಕತೆಗಳನ್ನು ಪ್ರಾತ್ಯಕ್ಷಿಸುವುದು ಮತ್ತೊಂದು ಭಾಗದಲ್ಲಿ ರೈತರು ಅಳವಡಿಸುವ ಪದ್ಧತಿಗಳೊಂದಿಗೆ ಚೆಕ್ ಪ್ಲಾಟ್ ಆಗಿ ನಿರ್ವಹಿಸುವುದು
- ಶೇ.30 ರಷ್ಟು ಪ್ರಾತ್ಯಕ್ಷಿಕೆಗಳನ್ನು ಬೆಳೆ ಆಧಾರಿತ ಪದ್ಧತಿಗಳ ಮೇಲೆ ಆಯೋಜಿಸುವುದು
- ಅಕ್ಕಿ ಬೆಳೆಯಲ್ಲಿ ನೇರ ಬಿತ್ತನೆ/ ಸಾಲು ನಾಟಿ/ SRI (ಜಿಲ್ಲೆಯ ಪ್ರತಿಶತ 1.5 ರಷ್ಟು ಅಕ್ಕಿ ಬೆಳೆ ಪ್ರದೇಶದಲ್ಲಿ) ಪ್ರಾತ್ಯಕ್ಷಿಕೆಗಳನ್ನು ಮತ್ತು ಸಂಕರಣ ಅಕ್ಕಿ ಪ್ರಾತ್ಯಕ್ಷಿಕೆಗಳನ್ನು (ಜಿಲ್ಲೆಯ ಪ್ರತಿಶತ 1.5 ರಷ್ಟು ಅಕ್ಕಿ ಬೆಳೆ ಪ್ರದೇಶದಲ್ಲಿ) ಹಮ್ಮಿಕೊಳ್ಳುವುದು.
- ಅಕ್ಕಿ ಆಧಾರಿತ ಬೆಳೆ ಪದ್ಧತಿ (Rice based Cropping System) ಪ್ರಾತ್ಯಕ್ಷಿಕೆಗಳನ್ನು ಮಳೆಯಾಶ್ರಿತ ಪ್ರದೇಶದಲ್ಲಿ ನೇರ ಬತ್ತ ಬಿತ್ತನೆ ನಂತರ ಕಡಲೆ ಬೆಳೆಯನ್ನು ಅನುಕ್ರಮ(sequence) ಪದ್ಧತಿಯಲ್ಲಿ ಬೆಳೆಯುವ ಬಗ್ಗೆ ಹಾಗೂ ನೀರಾವರಿ ಪ್ರದೇಶದಲ್ಲಿ ಬತ್ತ ನಂತರ ಕಡಲೆ/ ಚನ್ನಂಗಿ/ ಹೆಸರು/ ಉದ್ದು ಬೆಳೆಗಳನ್ನು ಅನುಕ್ರಮ ಪದ್ಧತಿಯಲ್ಲಿ ಬೆಳೆಯುವ ಬಗ್ಗೆ ಆಯೋಜಿಸುವುದು
- ದ್ವಿದಳಧಾನ್ಯಗಳಲ್ಲಿ ಅಂತರ ಬೆಳೆ/ ಸುಧಾರಿತ ತಳಿಗಳ/ ಕೂರಿಗೆ ಬಿತ್ತನೆ /ಊರು ಬಿತ್ತನೆ (Dibbling) ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
- ದ್ವಿದಳ ಧಾನ್ಯ ಆಧಾರಿತ ಬೆಳೆ ಪದ್ಧತಿಗಳ( ದ್ವಿದಳ ಧಾನ್ಯ ಬೆಳೆ ಮುಖ್ಯ ಬೆಳೆಯಾಗಿ) ಬಗ್ಗೆ ಮತ್ತು ವಾಣಿಜ್ಯ ಬೆಳೆಗಳಾದ ಕಬ್ಬು ಮತ್ತು ಹತ್ತಿ ಬೆಳೆಗಳಲ್ಲಿ ಹಾಗೂ ಎಣ್ಣೆಕಾಳು ಬೆಳೆಗಳಾದ ಸೋಯಾಬೀನ್ ಮತ್ತು ನೆಲಗಡಲೆ ಬೆಳೆಗಳಲ್ಲಿ ಹಾಗೂ ಒರಟು ಧಾನ್ಯಗಳಲ್ಲಿ ದ್ವಿದಳಧಾನ್ಯ ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆಯುವ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು

- ಸುಧಾರಿತ ತಾಂತ್ರಿಕತೆಗಳ ಬಗ್ಗೆ ಸ್ಥಳೀಯ ಸಂಶೋಧನಾ ಕೇಂದ್ರ/ ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಅಂತಹ ತಾಂತ್ರಿಕತೆಗಳ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.

- ಪ್ರಾತ್ಯಕ್ಷಿಕೆಯ ವಿವರಣಾ ಫಲಕ (Display board) ದಲ್ಲಿ ರೈತರ ಸಂಖ್ಯೆ, ಹಳ್ಳಿಯ ಹೆಸರು, ತಳಿ ಮತ್ತು ಪ್ರಾತ್ಯಕ್ಷಿಕೆಯ ವಿವರ, ಬಳಸಲಾದ ಪೋಷಕಾಂಶಗಳು, ಬಿತ್ತನೆ/ನಾಟಿ ದಿನಾಂಕ, ಬಿತ್ತನೆ ಬೀಜ ಪ್ರಮಾಣ, ಬೆಳೆಯ ಅಂತರ, ಬಳಸಲಾದ ಪರಿಕರಗಳು ಇತ್ಯಾದಿಗಳ ಬಗ್ಗೆ ಮಾಹಿತಿ ನಮೂದಿಸುವುದು

- ಬೆಳೆಯು ಕಾಳು ತುಂಬುವ ಹಂತದಲ್ಲಿರುವಾಗ (Grain filling stage) ಕ್ಷೇತ್ರೋತ್ಸವವನ್ನು ಆಚರಿಸುವುದು

**ಗುಚ್ಛ ಪ್ರಾತ್ಯಕ್ಷಿಕೆಗಳಿಗೆ ಮಾಡಬಹುದಾದ ವೆಚ್ಚ ಮತ್ತು ಪ್ರೇರಕಗಳ ಬಗ್ಗೆ ವಿವರ:**

| ಪ್ರಾತ್ಯಕ್ಷಿಕೆ | ಮೊತ್ತ(ರೂ) |
|---|---|
| ಅಕ್ಕಿ ಬೆಳೆಯಲ್ಲಿ ನೇರ ಬಿತ್ತನೆ/ ಸಾಲು ನಾಟಿ/ SRI (ಜಿಲ್ಲೆಯ ಪ್ರತಿಶತ 1.5 ರಷ್ಟು ಅಕ್ಕಿ ಬೆಳೆ ಪ್ರದೇಶ) ಪ್ರಾತ್ಯಕ್ಷಿಕೆಗಳನ್ನು ಮತ್ತು ಸಂಕರಣ ಅಕ್ಕಿ ಪ್ರಾತ್ಯಕ್ಷಿಕೆಗಳನ್ನು (ಜಿಲ್ಲೆಯ ಪ್ರತಿಶತ 0.5 ರಷ್ಟು ಅಕ್ಕಿ ಬೆಳೆ ಪ್ರದೇಶ) ಹಮ್ಮಿಕೊಳ್ಳುವುದು. | ರೂ. 7500/ಹೆ |
| ***<u>ಅಕ್ಕಿ ಆಧಾರಿತ ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಗಳು (Rice based Cropping System)</u>***<br>• ಮಳೆಯಾಶ್ರಿತ ಪ್ರದೇಶದಲ್ಲಿ ನೇರ ಬತ್ತ ಬಿತ್ತನೆ ನಂತರ ಕಡಲೆ ಬೆಳೆಯನ್ನು ಅನುಕ್ರಮ(sequence) ಪದ್ಧತಿಯಲ್ಲಿ ಬೆಳೆಯುವುದು<br>• ನೀರಾವರಿ ಪ್ರದೇಶದಲ್ಲಿ ಬತ್ತ ನಂತರ ಕಡಲೆ/ ಚನ್ನಂಗಿ/ ಹೆಸರು/ ಉದ್ದು ಬೆಳೆಗಳನ್ನು ಅನುಕ್ರಮ ಪದ್ಧತಿಯಲ್ಲಿ ಬೆಳೆಯುವುದು | ರೂ.12500/ಹೆ<br>ರೂ.12500/ಹೆ |
| ದ್ವಿದಳಧಾನ್ಯಗಳಲ್ಲಿ ಸುಧಾರಿತ ತಾಂತ್ರಿಕತೆಗಳಾದ ಅಂತರ ಬೆಳೆ/ ಸುಧಾರಿತ ತಳಿಗಳ/ ಬಿತ್ತನೆ ಬೀಜ ಕೂರಿಗೆ/ ಊರುಬಿತ್ತನೆ (Dibbling) ಇತ್ಯಾದಿಗಳ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು. | ರೂ. 7500/ಹೆ |
| ***<u>ದ್ವಿದಳಧಾನ್ಯ ಆಧಾರಿತ ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಗಳು:</u>***<br>ದ್ವಿದಳ ಧಾನ್ಯ ಆಧಾರಿತ ಬೆಳೆ ಪದ್ಧತಿ ಬಗ್ಗೆ ಮತ್ತು ವಾಣಿಜ್ಯ ಬೆಳೆಗಳಾದ ಕಬ್ಬು ಮತ್ತು ಹತ್ತಿ ಬೆಳೆಗಳಲ್ಲಿ ಹಾಗೂ ಎಣ್ಣೆಕಾಳು ಬೆಳೆಗಳಾದ ಸೋಯಾಬೀನ್ ಮತ್ತು ನೆಲಗಡಲೆ ಬೆಳೆಗಳಲ್ಲಿ ಹಾಗೂ ಒರಟು ಧಾನ್ಯಗಳಲ್ಲಿ ದ್ವಿದಳಧಾನ್ಯ ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆಯುವ ಬಗ್ಗೆ | ರೂ.12500/ಹೆ |

***ಎನ್.ಎಫ್.ಎಸ್.ಎಂ(ಅಕ್ಕಿ)ಯೋಜನೆಯಡಿ ಗುಚ್ಛ ಪ್ರಾತ್ಯಕ್ಷಿಕೆಗಳು:*** **(ಪ್ರತಿ ಹೆ.ಗೆ ವೆಚ್ಚ)**

| ಕ್ರ.ಸಂ | ವಿವರ | ಮೊತ್ತ(ರೂ) |
|---|---|---|
| 1 | ಸಸಿ ಮಡಿ ತಯಾರಿಕೆ, ಬೀಜ ವೆಚ್ಚ ಮತ್ತು ಬೀಜೋಪಚಾರಕ್ಕೆ | 2500.00 |
| 2 | ಹಸಿರೆಲೆ ಗೊಬ್ಬರ ಮತ್ತು ಲಘುಪೋಷಕಾಂಶಗಳಿಗೆ (ಸತು /ಬೋರಾನ್) | 1400.00 |
| 3 | ಯಾಂತ್ರೀಕೃತ ನಾಟಿ ಪದ್ಧತಿ /ನೇರ ಬಿತ್ತನೆ/ಸಾಲು ಬಿತ್ತನೆಗೆ ಪ್ರೋತ್ಸಾಹ | 1500.00 |
| 4 | ಕಳೆ ನಿಯಂತ್ರಣ | 500.00 |
| 5 | ಜೈವಿಕ ಕೀಟನಾಶಕಗಳೊಂದಿಗೆ ಸಸ್ಯ ಸಂರಕ್ಷಣೆಗೆ | 800.00 |
| 6 | ವಿಜ್ಞಾನಿಗಳ/ಕೇಂದ್ರ ಸರ್ಕಾರದ ಅಧಿಕಾರಿಗಳ/ ಯೋಜನೆ ಉಸ್ತುವಾರಿ ತಂಡ /ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ (ಯಾವುದೇ ರೀತಿಯ ಪ್ರವಾಸ/ತುಟ್ಟಿ ಭತ್ಯೆ ಹೊರತುಪಡಿಸಿ) (ಪ್ರತಿ ಭೇಟಿಗೆ) | 300.00 |
| 7 | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ (Display board) (100 ಹೆಕ್ಟೇರ್ ಗುಚ್ಛಕ್ಕೆ ಪ್ರಚಾರ ಸಾಮಗ್ರಿಯ ವಿತರಣೆ ತಗಲುವ ವೆಚ್ಚ ರೂ. 22500/- ಹಾಗೂ ಪ್ರಾತ್ಯಕ್ಷಿಕೆಯ ವಿವರಣಾ ಫಲಕ ತಗಲುವ ವೆಚ್ಚ ರೂ. 2500/-) (ಪ್ರತಿ ಹೆಕ್ಟೇರ್‌ಗೆ ಅನುಕ್ರಮವಾಗಿ ರೂ.225/- ಹಾಗೂ ರೂ.25/- ರಂತೆ) | 250.00 |
| 8 | ಕ್ಷೇತ್ರೋತ್ಸವ/ ರೈತರ ಗೋಷ್ಠಿ (100 ಹೆಕ್ಟೇರ್ ಗುಚ್ಛಕ್ಕೆ ತಗಲುವ ವೆಚ್ಚ ರೂ. 25000/-) | 250.00 |
| | **ಒಟ್ಟು** | **7500.00** |

***ಅಕ್ಕಿ ಆಧಾರಿತ ಬೆಳೆ ಪದ್ಧತಿ* ಪ್ರಾತ್ಯಕ್ಷಿಕೆಗಳಿಗೆ ಮಾಡಬಹುದಾದ ವೆಚ್ಚ ಮತ್ತು ಪ್ರೇರಕಗಳ ಬಗ್ಗೆ ವಿವರ: (ಪ್ರತಿ ಹೆ.ಗೆ ವೆಚ್ಚ)**

| ಕ್ರ.ಸಂ | ವಿವರ | ಮೊತ್ತ(ರೂ) |
|---|---|---|
| 1 | ಬತ್ತ ಮತ್ತು ದ್ವಿದಳಧಾನ್ಯಗಳ ಬಿತ್ತನೆ ಬೀಜ | 4000.00 |
| 2 | ಹಸಿರೆಲೆ ಗೊಬ್ಬರ ಮತ್ತು ಲಘುಪೋಷಕಾಂಶಗಳಿಗೆ (ಜಿಪ್ಸಂ/ ಕೃಷಿ ಸುಣ್ಣ/ಸತು /ಬೋರಾನ್/ಗಂಧಕ) | 3000.00 |
| 3 | ಬತ್ತದ ಯಾಂತ್ರೀಕೃತ ನಾಟಿ ಪದ್ಧತಿ /ನೇರ ಬಿತ್ತನೆ/ಸಾಲು ಬಿತ್ತನೆ ಹಾಗೂ ದ್ವಿದಳಧಾನ್ಯಗಳಲ್ಲಿ ಬಿತ್ತನೆಗೆ ಪ್ರೋತ್ಸಾಹ | 2000.00 |
| 4 | ಕಳೆ ನಿಯಂತ್ರಣ | 900.00 |
| 5 | ಜೈವಿಕ ಕೀಟನಾಶಕಗಳೊಂದಿಗೆ ಸಸ್ಯ ಸಂರಕ್ಷಣೆಗೆ | 1000.00 |
| 6 | ವಿಜ್ಞಾನಿಗಳ/ಕೇಂದ್ರ ಸರ್ಕಾರದ ಅಧಿಕಾರಿಗಳ/ ಯೋಜನೆ ಉಸ್ತುವಾರಿ ತಂಡ /ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ (ಯಾವುದೇ ರೀತಿಯ ಪ್ರವಾಸ/ತುಟ್ಟಿ ಭತ್ಯೆ ಹೊರತುಪಡಿಸಿ) (ಪ್ರತಿ ಭೇಟಿಗೆ) | 600.00 |
| 7 | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ (100 ಹೆಕ್ಟೇರ್ ಗುಚ್ಛಕ್ಕೆ ಪ್ರಚಾರ ಸಾಮಗ್ರಿಯ ವಿತರಣೆ ತಗಲುವ ವೆಚ್ಚ ರೂ. 22500/- ಹಾಗೂ ಪ್ರಾತ್ಯಕ್ಷಿಕೆಯ ವಿವರಣಾ ಫಲಕ ತಗಲುವ ವೆಚ್ಚ ರೂ. 2500/-) (ಪ್ರತಿ ಹೆಕ್ಟೇರ್‌ಗೆ ಅನುಕ್ರಮವಾಗಿ ರೂ.225/- ಹಾಗೂ ರೂ.25/- ರಂತೆ) | 500.00 |
| 8 | ಕ್ಷೇತ್ರೋತ್ಸವ/ ರೈತರ ಗೋಷ್ಠಿ-ದ್ವಿದಳಧಾನ್ಯ ಬೆಳೆ ಕಟಾವು ಸಮಯದಲ್ಲಿ ಆಚರಿಸುವುದು (100 ಹೆಕ್ಟೇರ್ ಗುಚ್ಛಕ್ಕೆ ತಗಲುವ ವೆಚ್ಚ ರೂ. 25000/-) | 500.00 |
| | **ಒಟ್ಟು** | **12500.00** |

**(ಮೇಲೆ ತಿಳಿಸಿದ ಘಟಕಗಳ ವೆಚ್ಚದಲ್ಲಿ ಉಳಿತಾಯವಾದಲ್ಲಿ ಸಾವಯವ ಗೊಬ್ಬರ ಘಟಕಕ್ಕೆ ಬಳಸಿಕೊಳ್ಳುವುದು )**

**ಎನ್.ಎಫ್.ಎಸ್.ಎಂ (ದ್ವಿದಳ ಧಾನ್ಯ) ಯೋಜನೆಯಡಿ ಗುಚ್ಛ ಪ್ರಾತ್ಯಕ್ಷಿಕೆಗಳು: (ಪ್ರತಿ ಹೆ.ಗೆ ವೆಚ್ಚ)**

| ಕ್ರ.ಸಂ | ವಿವರ | ಪ್ರತಿ ಹೆ.ಗೆ ವೆಚ್ಚ (ರೂ) |
|---|---|---|
| 1 | ಸುಧಾರಿತ ತಳಿಗಳ ಬಿತ್ತನೆ ಬೀಜ ಮತ್ತು ಬೀಜೋಪಚಾರ (ರೈಜೋಬಿಯಂ ಜೀವಾಣು, ಶಿಲೀಂಧ್ರನಾಶಕ, ಪಿ.ಎಸ್.ಬಿ) ವೆಚ್ಚ | 2000.00 |
| 2 | ಜಿಪ್ಸಂ ಮತ್ತು ಲಘುಪೋಷಕಾಂಶಗಳು | 2000.00 |
| 3 | ಕೂರಿಗೆ ಬಿತ್ತನೆ /ಸಾಲು ಬಿತ್ತನೆ/ ಊರು ಬಿತ್ತನೆ ಕಾರ್ಯಗಳಿಗೆ ಪ್ರೋತ್ಸಾಹ | 1500.00 |
| 4 | ಜೈವಿಕ ಪೀಡೆನಾಶಕಗಳು ಮತ್ತು ಸಸ್ಯ ಸಂರಕ್ಷಣಾ ಔಷಧಿ | 600.00 |
| 5 | ಕಳೆ ನಿಯಂತ್ರಣ | 600.00 |
| 6 | ವಿಜ್ಞಾನಿಗಳ/ಕೇಂದ್ರ ಸರ್ಕಾರದ ಅಧಿಕಾರಿಗಳ/ ಯೋಜನೆ ಉಸ್ತುವಾರಿ ತಂಡ /ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ(ಯಾವುದೇ ರೀತಿಯ ಪ್ರವಾಸ/ತುಟ್ಟಿ ಭತ್ಯೆ ಹೊರತುಪಡಿಸಿ) (ಪ್ರತಿ ಭೇಟಿಗೆ) | 300.00 |
| 7 | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ (Display board)(100 ಹೆಕ್ಟೇರ್ ಗುಚ್ಛಕ್ಕೆ ಪ್ರಚಾರ ಸಾಮಗ್ರಿಯ ವಿತರಣೆ ತಗಲುವ ವೆಚ್ಚ ರೂ. 22500/-ಹಾಗೂ ಪ್ರಾತ್ಯಕ್ಷಿಕೆಯ ವಿವರಣಾ ಫಲಕ ತಗಲುವ ವೆಚ್ಚ ರೂ. 2500/-)(ಪ್ರತಿ ಹೆಕ್ಟೇರ್‌ಗೆ ಅನುಕ್ರಮವಾಗಿ ರೂ.225/- ಹಾಗೂ ರೂ.25/- ರಂತೆ) | 250.00 |
| 8 | ಕ್ಷೇತ್ರೋತ್ಸವ/ ರೈತರ ಗೋಷ್ಠಿ (100 ಹೆಕ್ಟೇರ್ ಗುಚ್ಛಕ್ಕೆ ತಗಲುವ ವೆಚ್ಚ ರೂ. 25000/-) | 250.00 |
| | **ಒಟ್ಟು** | **7500.00** |

***ದ್ವಿದಳಧಾನ್ಯ ಆಧಾರಿತ ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಗಳು:*** **(ಪ್ರತಿ ಹೆ.ಗೆ ವೆಚ್ಚ)**

| ಕ್ರ.ಸಂ | ವಿವರ | ಮೊತ್ತ(ರೂ) |
|---|---|---|
| 1 | ದ್ವಿದಳಧಾನ್ಯ ಬೆಳೆ ಮತ್ತು ಇತರೆ ಅಂತರ ಬೆಳೆಗಳ ಸುಧಾರಿತ ತಳಿಗಳ ಬಿತ್ತನೆ ಬೀಜ | 4000.00 |
| 2 | ಜೈವಿಕ ಗೊಬ್ಬರ ಮತ್ತು ಲಘುಪೋಷಕಾಂಶಗಳಿಗೆ (ಜಿಪ್ಸಂ/ ಕೃಷಿ ಸುಣ್ಣ/ಸತು /ಬೋರಾನ್/ ಗಂಧಕ) | 3000.00 |
| 3 | ನೇರ ಬಿತ್ತನೆ/ಕೂರಿಗೆ ಬಿತ್ತನೆ/ ಊರು ಬಿತ್ತನೆಗೆ ಪ್ರೋತ್ಸಾಹ | 2000.00 |
| 4 | ಕಳೆ ನಿಯಂತ್ರಣ | 900.00 |
| 5 | ಜೈವಿಕ ಕೀಟನಾಶಕಗಳೊಂದಿಗೆ ಸಸ್ಯ ಸಂರಕ್ಷಣೆಗೆ | 1000.00 |
| 6 | ವಿಜ್ಞಾನಿಗಳ/ಕೇಂದ್ರ ಸರ್ಕಾರದ ಅಧಿಕಾರಿಗಳ/ ಯೋಜನೆ ಉಸ್ತುವಾರಿ ತಂಡ /ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ (ಯಾವುದೇ ರೀತಿಯ ಪ್ರವಾಸ/ತುಟ್ಟಿ ಭತ್ಯೆ ಹೊರತುಪಡಿಸಿ) (ಪ್ರತಿ ಭೇಟಿಗೆ) | 600.00 |
| 7 | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ (100 ಹೆಕ್ಟೇರ್ ಗುಚ್ಛಕ್ಕೆ ಪ್ರಚಾರ ಸಾಮಗ್ರಿಯ ವಿತರಣೆ ತಗಲುವ ವೆಚ್ಚ ರೂ. 22500/- ಹಾಗೂ ಪ್ರಾತ್ಯಕ್ಷಿಕೆಯ ವಿವರಣಾ ಫಲಕ ತಗಲುವ ವೆಚ್ಚ ರೂ. 2500/-) (ಪ್ರತಿ ಹೆಕ್ಟೇರ್‌ಗೆ ಅನುಕ್ರಮವಾಗಿ ರೂ.225/- ಹಾಗೂ ರೂ.25/- ರಂತೆ) | 500.00 |
| 8 | ಕ್ಷೇತ್ರೋತ್ಸವ/ ರೈತರ ಗೋಷ್ಠಿ-ದ್ವಿದಳಧಾನ್ಯ ಬೆಳೆ ಕಟಾವು ಸಮಯದಲ್ಲಿ ಆಚರಿಸುವುದು (100 ಹೆಕ್ಟೇರ್ ಗುಚ್ಛಕ್ಕೆ ತಗಲುವ ವೆಚ್ಚ ರೂ. 25000/-) | 500.00 |
| | **ಒಟ್ಟು** | **12500.00** |

**(ಮೇಲೆ ತಿಳಿಸಿದ ಘಟಕಗಳ ವೆಚ್ಚದಲ್ಲಿ ಉಳಿತಾಯವಾದಲ್ಲಿ ಸಾವಯವ ಗೊಬ್ಬರ ಘಟಕಕ್ಕೆ ಬಳಸಿಕೊಳ್ಳುವುದು)**

**<u>ಬಿತ್ತನೆ ಬೀಜ:</u>**

- ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಗುಚ್ಛ ಪ್ರಾತ್ಯಕ್ಷಿಕೆಗಳಾಗಿ , ಪ್ರತಿ ಜಿಲ್ಲೆಯಲ್ಲಿ ಏರ್ಪಡಿಸುವಂತೆ ಯೋಜಿಸಲಾಗಿದ್ದು, ಪ್ರಾತ್ಯಕ್ಷಿಕೆಗಾಗಿ ಕೃಷಿ ಪರಿಕರಗಳೊಂದಿಗೆ ಸುಧಾರಿತ ತಳಿಗಳ ಬಿತ್ತನೆ ಬೀಜವನ್ನು ರೈತರಿಗೆ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

- **ಯಾವುದೇ ಎನ್.ಎಫ್.ಎಸ್.ಎಂ ಯೋಜನೆಯಡಿ ಬೆಳೆಗಳ ಬಿತ್ತನೆ ಕಿರುಚೀಲಗಳ ವಿತರಣಾ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ.**

- **ಸಂಕರಣ, ಮೂಲ ಮತ್ತು ಪ್ರಮಾಣಿತ ಬಿತ್ತನೆ ಬೀಜಗಳ ಉತ್ಪಾದನೆಗೆ ವಿತರಿಸುವ ಪ್ರೋತ್ಸಾಹಧನ ಕಾರ್ಯಕ್ರಮವನ್ನು ಹಿಂತೆಗೆದುಕೊಳ್ಳಲಾಗಿದೆ.**

- **<u>ಹತ್ತು ವರ್ಷಗಳಿಂದೀಚೆಗೆ ಬಿಡುಗಡೆಯಾದ ತಳಿಗಳ ಬಿತ್ತನೆ ಬೀಜಗಳನ್ನು ಮಾತ್ರ ವಿತರಿಸಲು ಅವಕಾಶವಿರುತ್ತದೆ</u>**

- **ಬತ್ತ :**
  - ✓ ಹೈಬ್ರಿಡ್ ಬತ್ತ – ಶೇ.50 ರಷ್ಟು ರಿಯಾಯಿತಿ , ಪ್ರತಿ ಕ್ವಿಂಟಾಲ್ ಗೆ ರೂ. ರೂ.5000/– ಕ್ಕೆ ಮೀರದಂತೆ
  - ✓ 10 ವರ್ಷಗಳಿಂದೀಚೆಗೆ ಬಿಡುಗಡೆಯಾದ ಬತ್ತದ ತಳಿಗಳ ಬಿತ್ತನೆ ಬೀಜಗಳಿಗೆ ಪ್ರತಿ ಕ್ವಿಂಟಾಲಿಗೆ ರೂ. 1000/– ರಿಯಾಯಿತಿ ಸೌಲಭ್ಯ

- **ದ್ವಿದಳಧಾನ್ಯಗಳು:** ಶೇ.50 ರಷ್ಟು ರಿಯಾಯಿತಿ , ಪ್ರತಿ ಕ್ವಿಂಟಾಲ್ ಗೆ ರೂ. ರೂ.2500/– ಕ್ಕೆ ಮೀರದಂತೆ ರಿಯಾಯಿತಿ ಸೌಲಭ್ಯ 10 ವರ್ಷಗಳಿಂದೀಚೆಗೆ ಬಿಡುಗಡೆಯಾದ ದ್ವಿದಳಧಾನ್ಯ ತಳಿಗಳ ಬಿತ್ತನೆ ಬೀಜಗಳಿಗೆ ಮಾತ್ರ ಲಭ್ಯವಿರುತ್ತದೆ.

**<u>ಸಮಗ್ರ ಪೋಷಕಾಂಶ ಮತ್ತು ಸಮಗ್ರ ಪೀಡೆ ನಿರ್ವಹಣೆ:</u>**

ಎನ್.ಎಫ್.ಎಸ್.ಎಮ್. (ಅಕ್ಕಿ) ಮತ್ತು ದ್ವಿದಳಧಾನ್ಯ ಯೋಜನೆಗಳಡಿ ಸಮಗ್ರ ಪೋಷಕಾಂಶ ಮತ್ತು ಸಮಗ್ರ ಪೀಡೆ ನಿರ್ವಹಣೆಗಾಗಿ ವಿವಿಧ ಘಟಕಗಳ ಅನುಷ್ಠಾನಕ್ಕಾಗಿ ಪ್ರತಿ ಹೆಕ್ಟೇರ್‌ಗೆ ನೀಡಬಹುದಾದ ಗರಿಷ್ಠ ಸಹಾಯಧನದ ವಿವರಗಳನ್ನು ಅನುಬಂಧ–1 ಮತ್ತು 2ರಲ್ಲಿ ನೀಡಲಾಗಿದೆ.

**<u>ಕೃಷಿ ಯಾಂತ್ರೀಕರಣ ಮತ್ತು ನೀರಾವರಿ ಸಲಕರಣೆಗಳು:</u>**

ಎನ್.ಎಫ್.ಎಸ್.ಎಮ್. (ಅಕ್ಕಿ) ಮತ್ತು ದ್ವಿದಳಧಾನ್ಯ ಯೋಜನೆಗಳಡಿ ನೀಡಲಾಗುವ ಕೃಷಿ ಯಂತ್ರೋಪಕರಣಗಳಿಗೆ ಮತ್ತು ನೀರಾವರಿ ಸಲಕರಣೆಗಳು ಮತ್ತು ಅವುಗಳ ಗರಿಷ್ಠ ಸಹಾಯಧನದ ವಿವರಗಳನ್ನು ಅನುಬಂಧ–1 ಮತ್ತು 2ರಲ್ಲಿ ನೀಡಲಾಗಿದೆ.

**ರೈತರಿಗೆ ತರಬೇತಿ:**

- 'ಬೆಳೆಪದ್ಧತಿ' (Cropping System) ತತ್ವದಡಿ ಆಯೋಜಿಸುವುದು
- 30 ರೈತರ ಗುಂಪುಗಳನ್ನೊಳಗೊಂಡ Session ಗೆ ರೂ. 3500/– ನಂತೆ ಒಟ್ಟು ನಾಲ್ಕು 'Session'ಗಳನ್ನು ಏರ್ಪಡಿಸುವುದು
- ಈ ನಾಲ್ಕು Sessionಗಳಲ್ಲಿ ಒಂದನ್ನು ಪೂರ್ವ ಮುಂಗಾರಿನಲ್ಲಿ, ಎರಡನೆಯದನ್ನು ಮುಂಗಾರು ಬೆಳೆಯ ಅವಧಿಯಲ್ಲಿ, ಮೂರನೆಯ Sessionನ್ನು ಹಿಂಗಾರಿನಲ್ಲಿ ಮತ್ತು ನಾಲ್ಕನೆಯದನ್ನು ಹಿಂಗಾರು ಬೆಳೆಯ ಕಟಾವಿನ ಹಂತದಲ್ಲಿ ಏರ್ಪಡಿಸುವುದು.
- ಪ್ರತಿ ತರಬೇತಿಗೆ ಒಟ್ಟು ರೂ. 14,000/– ನ್ನು ಈ ಕೆಳಗಿನಂತೆ ವೆಚ್ಚ ಮಾಡಲು ತಿಳಿಸಲಾಗಿದೆ.

| ಘಟಕ | ದರ | ಒಟ್ಟು ಮೊತ್ತ(ರೂ) |
|---|---|---|
| ಒಬ್ಬ ತರಬೇತಿದಾರನ ಗೌರವಧನ | ಒಟ್ಟು ನಾಲ್ಕು 'Session'ಗಳಿಗೆ ರೂ 500/ Session ರಂತೆ | 2000.00 |
| ತರಬೇತಿ ಸಾಮಗ್ರಿಗಳು ಹಾಗೂ ಸ್ಟೇಷನರಿ | ಒಟ್ಟು ನಾಲ್ಕು 'Session'ಗಳಿಗೆ ರೂ 500/ Session ರಂತೆ | 2000.00 |
| ತರಬೇತುದಾರರಿಗೆ, ತರಬೇತಿ ಪಡೆಯುವವರಿಗೆ ಮತ್ತು ಪೂರಕ ಸಿಬ್ಬಂಧಿಗಳಿಗೆ ಟೀ/ಲಘು ಉಪಹಾರ ಒದಗಿಸವುದು | ಒಬ್ಬ ರೈತನಿಗೆ ರೂ 50 ರಂತೆ ಪ್ರತಿ 'Session ಗೆ 35 (ರೈತರು+ಸಿಬ್ಬಂದಿ) 50X35X4 | 7000.00 |
| ಸಾದಿಲ್ವಾರು ವೆಚ್ಚ, ಇಂಧನ ವೆಚ್ಚ ಮತ್ತು ರೈತರ ಪ್ರಯಾಣ ವೆಚ್ಚ | ಒಟ್ಟು ನಾಲ್ಕು 'Session'ಗಳಿಗೆ ರೂ 750/ Session ರಂತೆ | 3000.00 |
| **ಒಟ್ಟು** | | **14000.00** |

## ಅನುಬಂಧ–1

### *ಎನ್.ಎಫ್.ಎಸ್.ಎಂ(ಅಕ್ಕಿ)ಯೋಜನೆಯಡಿ ದೊರೆಯುವ ಸೌಲಭ್ಯಗಳು*

| ಕ್ರ.ಸ | ಘಟಕ | ಅನುಮೋದಿತ ಗರಿಷ್ಠ ಸಹಾಯಧನ |
|---|---|---|
| 1 | **100 ಹೆಕ್ಟೇರ್ ಪ್ರದೇಶದ ಗುಚ್ಛ ಪ್ರಾತ್ಯಕ್ಷಿಕೆಗಳು** | |
| | a) ನೇರ ಬತ್ತ ಬಿತ್ತನೆ ಕಾರ್ಯಕ್ರಮ/ ಸಾಲು ನಾಟಿ/ ಶ್ರೀ ಪದ್ಧತಿ (ಜಿಲ್ಲೆಯ ಶೇ.1.5ರಷ್ಟು ಪ್ರದೇಶ) | ಪ್ರತಿ ಹೆಕ್ಟೇರ್ ಗೆ ರೂ.7500/–ರಂತೆ |
| | b) ಹೈಬ್ರಿಡ್ ಬತ್ತದ ಪ್ರಾತ್ಯಕ್ಷಿಕೆಗಳು | ಪ್ರತಿ ಹೆಕ್ಟೇರ್ ಗೆ ರೂ.7500/–ರಂತೆ |
| | c) ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳು | ಪ್ರತಿ ಹೆಕ್ಟೇರ್ ಗೆ ರೂ.12500/–ರಂತೆ |
| 2 | **ಬಿತ್ತನೆ ಬೀಜ ವಿತರಣೆ** | |
| | (a) ಹೈಬ್ರಿಡ್ ಬತ್ತ | ಪ್ರತಿ ಕ್ವಿಂಟಾಲ್ ಗೆ ರೂ.5000/–ರಂತೆ |
| | (b) ಅಧಿಕ ಇಳುವರಿ ತಳಿಗಳು | ಪ್ರತಿ ಕ್ವಿಂಟಾಲ್ ಗೆ ರೂ.1000/–ರಂತೆ |
| 3 | ***ಸಸ್ಯ ಮತ್ತು ಮಣ್ಣು ಸಂರಕ್ಷಣೆ ನಿರ್ವಹಣೆ*** | |
| | (a) ಲಘು ಪೋಷಕಾಂಶಗಳು | ಪ್ರತಿ ಹೆಕ್ಟೇರ್ ಗೆ ರೂ.500/–ರಂತೆ |
| | (b) ಕೃಷಿ ಸುಣ್ಣ | ಪ್ರತಿ ಹೆಕ್ಟೇರ್ ಗೆ ರೂ.1000/–ರಂತೆ |
| | (c) ಸಸ್ಯ ಸಂರಕ್ಷಣಾ ಔಷಧಿಗಳು ಜೈವಿಕ ನಿಯಂತ್ರಣ ಕಾರಕಗಳು | ಪ್ರತಿ ಹೆಕ್ಟೇರ್ ಗೆ ರೂ.500/–ರಂತೆ |
| | (d) ಕಳೆನಾಶಕಗಳು | ಪ್ರತಿ ಹೆಕ್ಟೇರ್ ಗೆ ರೂ.500/–ರಂತೆ |
| 4 | ***ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು/ ಸಾಧನಗಳು*** | |
| | (a) ಕೋನೋವೀಡರ್ | ಪ್ರತಿ ಘಟಕಕ್ಕೆ ರೂ.600/–ರಂತೆ |
| | (b) ಮಾನವ ಚಾಲಿತ ಸ್ಪ್ರೇಯರ್ | ಪ್ರತಿ ಘಟಕಕ್ಕೆ ರೂ.600/–ರಂತೆ |
| | (c) ಪವರ್ ನ್ಯಾಪ್‌ಸ್ಯಾಕ್ ಸ್ಪ್ರೇಯರ್ | ಪ್ರತಿ ಘಟಕಕ್ಕೆ ರೂ.3000/–ರಂತೆ |
| | (d) ಮಲ್ಟಿಕ್ರಾಪ್ ಪ್ಲ್ಯಾಂಟರ್ | ಪ್ರತಿ ಘಟಕಕ್ಕೆ ರೂ.15000/–ರಂತೆ |
| | (e) ಬಿತ್ತನೆ ಬೀಜ– ರಸಗೊಬ್ಬರ ಕೂರಿಗೆ | ಪ್ರತಿ ಘಟಕಕ್ಕೆ ರೂ.15000/–ರಂತೆ |
| | (f) ಪವರ್ ವೀಡರ್ | ಪ್ರತಿ ಘಟಕಕ್ಕೆ ರೂ.15000/–ರಂತೆ |
| | (g) ಜೀರೋ ಟಿಲ್ ಮಲ್ಟಿಕ್ರಾಪ್ ಪ್ಲ್ಯಾಂಟರ್ | ಪ್ರತಿ ಘಟಕಕ್ಕೆ ರೂ.15000/–ರಂತೆ |
| | (h) ಡ್ರಮ್ ಸೀಡರ್ | ಪ್ರತಿ ಘಟಕಕ್ಕೆ ರೂ.15000/–ರಂತೆ |
| | (i) ರೋಟೋವೇಟರ್ | ಪ್ರತಿ ಘಟಕಕ್ಕೆ ರೂ.35000/–ರಂತೆ |
| | (j) ಲೇಸರ್ ಲ್ಯಾಂಡ್ ಲೆವೆಲರ್ | ಪ್ರತಿ ಘಟಕಕ್ಕೆ ರೂ.150000/–ರಂತೆ |
| 5 | ***ಪಂಪ್ ಸೆಟ್‌ಗೆ ಪ್ರೋತ್ಸಾಹ ಧನ*** | ಪ್ರತಿ ಘಟಕಕ್ಕೆ ರೂ.10000/–ರಂತೆ |
| 6 | ***ಬತ್ತದ ಒಕ್ಕಣೆ ಯಂತ್ರ/ ಬಹು ಬೆಳೆ ಒಕ್ಕಣೆ ಯಂತ್ರ*** | ಪ್ರತಿ ಘಟಕಕ್ಕೆ ರೂ.40000/–ರಂತೆ |
| 7 | ***ಸೆಲ್ಫ್ ಪ್ರೊಪೆಲ್ಡ್ ಬತ್ತದ ನಾಟಿ ಯಂತ್ರ*** | ಪ್ರತಿ ಘಟಕಕ್ಕೆ ರೂ.75000/–ರಂತೆ |
| 8 | ***ಬೆಳೆ ಪದ್ಧತಿ ಆಧಾರಿತ ತರಬೇತಿಗಳು*** | ಪ್ರತಿ Session ಗೆ ರೂ. 3500/– ರಂತೆ<br>ಪ್ರತಿ ತರಬೇತಿಗೆ ರೂ..14000/–ರಂತೆ |

## ಅನುಬಂಧ-2

### *ಎನ್.ಎಫ್.ಎಸ್.ಎಂ(ದ್ವಿದಳಧಾನ್ಯಗಳು) ಯೋಜನೆಯಡಿ ದೊರೆಯುವ ಸೌಲಭ್ಯಗಳು*

| ಕ್ರ.ಸಂ | ಘಟಕ | ಅನುಮೋದಿತ ಗರಿಷ್ಠ ಸಹಾಯಧನ |
|---|---|---|
| 1 | *ಸುಧಾರಿತ ತಾಂತ್ರಿಕತೆಗಳ ಕುರಿತು ಪ್ರಾತ್ಯಕ್ಷಿಕೆಗಳು* | |
| | a) 100 ಹೆಕ್ಟೇರ್ ಪ್ರದೇಶದ ಗುಚ್ಛ ಪ್ರಾತ್ಯಕ್ಷಿಕೆಗಳು | ಪ್ರತಿ ಹೆಕ್ಟೇರ್ ಗೆ ರೂ.7500/-ರಂತೆ |
| | b) ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳು | ಪ್ರತಿ ಹೆಕ್ಟೇರ್ ಗೆ ರೂ.12500/-ರಂತೆ |
| 2 | *ಸುಧಾರಿತ ತಳಿಗಳ ಪ್ರಮಾಣಿತ ಬಿತ್ತನೆ ಬೀಜಗಳ ವಿತರಣೆ* | ಪ್ರತಿ ಕ್ವಿಂಟಾಲ್ ಗೆ ರೂ.2500/-ರಂತೆ |
| 3 | *ಸಮಗ್ರ ಪೋಷಕಾಂಶ ನಿರ್ವಹಣೆ* | |
| | a) ಲಘು ಪೋಷಕಾಂಶಗಳು | ಪ್ರತಿ ಹೆಕ್ಟೇರ್ ಗೆ ರೂ.500/-ರಂತೆ |
| | b) ಜಿಪ್ಸಂ/ ಗಂಧಕ 80% ಡಬ್ಲ್ಯೂ.ಪಿ | ಪ್ರತಿ ಹೆಕ್ಟೇರ್ ಗೆ ರೂ.750/-ರಂತೆ |
| | c) ಕೃಷಿ ಸುಣ್ಣ | ಪ್ರತಿ ಹೆಕ್ಟೇರ್ ಗೆ ರೂ.1000/-ರಂತೆ |
| | d) ಜೈವಿಕ ಗೊಬ್ಬರಗಳು | ಪ್ರತಿ ಹೆಕ್ಟೇರ್ ಗೆ ರೂ.100/-ರಂತೆ |
| *4* | *ಸಮಗ್ರ ಪೀಡೆ ನಿರ್ವಹಣೆ* | |
| | a) ಸಸ್ಯ ಸಂರಕ್ಷಣಾ ಔಷಧಿಗಳು | ಪ್ರತಿ ಹೆಕ್ಟೇರ್ ಗೆ ರೂ.500/-ರಂತೆ |
| | b) ಕಳೆನಾಶಕಗಳು | ಪ್ರತಿ ಹೆಕ್ಟೇರ್ ಗೆ ರೂ.500/-ರಂತೆ |
| 5 | *ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು/ ಸಾಧನಗಳು* | |
| | a) ಮಾನವ ಚಾಲಿತ ಸ್ಪ್ರೇಯರ್ | ಪ್ರತಿ ಘಟಕಕ್ಕೆ ರೂ.600/-ರಂತೆ |
| | b) ಪವರ್ ನ್ಯಾಪ್‌ಸ್ಯಾಕ್ ಸ್ಪ್ರೇಯರ್ | ಪ್ರತಿ ಘಟಕಕ್ಕೆ ರೂ.3000/-ರಂತೆ |
| | c) ಜೀರೋ ಟಿಲ್ ಸೀಡ್ ಡ್ರಿಲ್ | ಪ್ರತಿ ಘಟಕಕ್ಕೆ ರೂ.15000/- ರಂತೆ |
| | d) ಮಲ್ಟಿಕ್ರಾಪ್ ಪ್ಲ್ಯಾಂಟರ್ | ಪ್ರತಿ ಘಟಕಕ್ಕೆ ರೂ. 15000/- ರಂತೆ |
| | e) ಸೀಡ್ ಡ್ರಿಲ್ | ಪ್ರತಿ ಘಟಕಕ್ಕೆ ರೂ. 15000/- ರಂತೆ |
| | f) ಜೀರೋ ಟಿಲ್ ಮಲ್ಟಿಕ್ರಾಪ್ ಪ್ಲ್ಯಾಂಟರ್ | ಪ್ರತಿ ಘಟಕಕ್ಕೆ ರೂ.15000/- ರಂತೆ |
| | g) ರಿಡ್ಜ್ ಫರ್ರೋ ಪ್ಲ್ಯಾಂಟರ್ | ಪ್ರತಿ ಘಟಕಕ್ಕೆ ರೂ.15000/- ರಂತೆ |
| | h) ಚಿಸೆಲ್ಲರ್ | ಪ್ರತಿ ಘಟಕಕ್ಕೆ ರೂ.8000/- ರಂತೆ |
| | i) ರೋಟೋವೇಟರ್ | ಪ್ರತಿ ಘಟಕಕ್ಕೆ ರೂ.35000/- ರಂತೆ |
| | j) ಲೇಸರ್ ಲ್ಯಾಂಡ್ ಲೆವೆಲರ್ | ಪ್ರತಿ ಘಟಕಕ್ಕೆ ರೂ.150000/- ರಂತೆ |
| | k) ಟ್ರ್ಯಾಕ್ಟರ್ ಚಾಲಿತ ಸ್ಪ್ರೇಯರ್ | ಪ್ರತಿ ಘಟಕಕ್ಕೆ ರೂ. 10000/- ರಂತೆ |
| | l) ಬಹು ಬೆಳೆ ಒಕ್ಕಣೆ ಯಂತ್ರ | ಪ್ರತಿ ಘಟಕಕ್ಕೆ ರೂ.40000/- ರಂತೆ |
| 6 | *ಸಮರ್ಪಕ ನೀರಾವರಿ ಸಾಧನಗಳು* | |
| | a) ಸ್ಪ್ರಿಂಕ್ಲರ್ ಸೆಟ್ | ಪ್ರತಿ ಘಟಕಕ್ಕೆ 10000/- ರಂತೆ |
| | b) ಪಂಪ್ ಸೆಟ್ | ಪ್ರತಿ ಘಟಕಕ್ಕೆ 10000/- ರಂತೆ |
| | c) ನೀರು ಸಾಗಿಸುವ ಪೈಪುಗಳು | ಪ್ರತಿ ರೈತನಿಗೆ ರೂ.15000/-ರಂತೆ ಅಥವಾ ರೂ.25/-ರಂತೆ600 ಮೀ.ಗಳಿಗೆ ಮೀರದಂತೆ |
| | d) ಮೊಬೈಲ್ ರೈನ್ ಗನ್‌ಗಳು | ಪ್ರತಿ ಘಟಕಕ್ಕೆ 15000/- ರಂತೆ |
| 7 | ಬೆಳೆ ಪದ್ಧತಿ ಆಧಾರಿತ ತರಬೇತಿಗಳು | ಪ್ರತಿ Sessionಗೆ ರೂ. 3500/- ರಂತೆ ಪ್ರತಿ ತರಬೇತಿಗೆ ರೂ..14000/-ರಂತೆ |

## *I. ದ್ವಿದಳಧಾನ್ಯ ಆಧಾರಿತ ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಗಳು:*

ಮುಂಗಾರು ಹಂಗಾಮಿನಲ್ಲಿ ಬತ್ತದ ಬೆಳೆಯನ್ನು ಬೆಳೆದು ಇದರ ನಂತರ ಎರಡನೆಯ ಬೆಳೆಯಾಗಿ ದ್ವಿದಳ ಧಾನ್ಯಗಳಾದ ಉದ್ದು, ಹೆಸರು ಮತ್ತು ಅಲಸಂದೆ ಬೆಳೆಗಳನ್ನು ಬೆಳೆಯುವ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು. ಸದರಿ ಕಾರ್ಯಕ್ರಮವನ್ನು ***ಎನ್.ಎಫ್.ಎಸ್.ಎಮ್(ಅಕ್ಕಿ) ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಜಿಲ್ಲೆಗಳನ್ನು ಹೊರತುಪಡಿಸಿ,*** ಬತ್ತ ಬೆಳೆಯುವ ಇತರೆ ಪ್ರಮುಖ ಜಿಲ್ಲೆಗಳಾದ ಮಂಡ್ಯ, ರಾಯಚೂರು, ಕೊಪ್ಪಳ, ಮೈಸೂರು, ಚಿಕ್ಕಮಗಳೂರು, ದಾವಣಗೆರೆ, ಹಾಸನ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಕೈಗೊಳ್ಳುವುದು. ಪ್ರತಿ ಹೆಕ್ಟೇರ್ ನಲ್ಲಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲು ರೂ.12500/–ಗಳನ್ನು ನಿಗದಿಪಡಿಸಲಾಗಿದ್ದು, ಘಟಕವಾರು ವಿವರಗಳು ಈ ಕೆಳಗಿನಂತಿವೆ:

| **ಕ್ರ.ಸಂ** | **ಪರಿಕರ** | **ಪ್ರತಿ ಹೆಕ್ಟೇರ್‌ಗೆ ಅನುದಾನ (ರೂ.)** |
|---|---|---|
| **ಅ. ಬತ್ತ:** | | |
| 1 | ಬಿತ್ತನೆ ಬೀಜ | 900.00 |
| 2 | ಸೀಡ್ ಕಮ್ ಫರ್ಟಿಲೈಜರ್ ಉಪಯೋಗದ ವೆಚ್ಚ | 1500.00 |
| 3 | ಬೀಜೋಪಚರಕ್ಕಾಗಿ | 150.00 |
| 4 | ಜೈವಿಕ ಗೊಬ್ಬರ | 260.00 |
| 5 | ಸತು/ಸತುವಿನ ಸಲ್ಫೇಟ್ | 680.00 |
| 6 | ಕಳೆನಾಶಕ | 1000.00 |
| 7 | ಸಸ್ಯ ಸಂರಕ್ಷಣಾ ರಾಸಾಯನಿಕಗಳು | 500.00 |
| 8 | ಪವರ್ ವೀಡರ್ ಬಳಕೆಗೆ | 1500.00 |
| 9 | ಕ್ಷೇತ್ರೋತ್ಸವ | 250.00 |
| 10 | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ | 250.00 |
| 11 | ವಿಜ್ಞಾನಿಗಳ/ಕೇಂದ್ರ ಸರ್ಕಾರದ ಅಧಿಕಾರಿಗಳ/ ಯೋಜನೆ ಉಸ್ತುವಾರಿ ತಂಡ /ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ | 500.00 |
| | **ಒಟ್ಟು** | **7490.00** |
| **ಆ. ದ್ವಿದಳಧಾನ್ಯ (ಉದ್ದು/ ಹೆಸರು/ ಅಲಸಂದೆ):** | | |
| 1 | ಬಿತ್ತನೆ ಬೀಜ | 400.00 |
| 2 | ಬೀಜೋಪಚಾರಕ್ಕಾಗಿ | 210.00 |
| 3 | ಲಘುಪೋಷಕಾಂಶಗಳು | 600.00 |
| 4 | ಜೈವಿಕ ಗೊಬ್ಬರ | 100.00 |
| 5 | ಕಳೆನಾಶಕ | 1050.00 |
| 6 | ಸಮಗ್ರ ಪೀಡೆ ನಿರ್ವಹಣೆಗಾಗಿ | 750.00 |
| 7 | ಡಿ.ಎ.ಪಿ. Foliar Spray | 1300.00 |
| 8 | ಸಮುದಾಯ ಸಿಂಪರಣೆಗಾಗಿ (Community spraying) | 600.00 |
| | **ಒಟ್ಟು** | **5010.00** |
| | **ಮಹಾ ಮೊತ್ತ** | **12500.00** |

**(ಮೇಲೆ ತಿಳಿಸಿದ ಘಟಕಗಳ ವೆಚ್ಚದಲ್ಲಿ ಉಳಿತಾಯವಾದಲ್ಲಿ ಸಾವಯವ ಗೊಬ್ಬರ ಘಟಕಕ್ಕೆ ಬಳಸಿಕೊಳ್ಳುವುದು)**

## II. ಸರ್ಕಾರೇತರ ಸಂಸ್ಥೆಗಳ ಮೂಲಕ 100 ಹೆಕ್ಟೇರ್ ಪ್ರದೇಶದ ಗುಚ್ಛ ಪ್ರಾತ್ಯಕ್ಷಿಕೆಗಳು

ರಾಜ್ಯದಲ್ಲಿ ದ್ವಿದಳಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ದ್ವಿದಳಧಾನ್ಯ ಉತ್ಪಾದನಾ ಹಿಂಗಾರು ಹಂಗಾಮಿನಲ್ಲಿ ಈಗಾಗಲೇ ನಿಗದಿಪಡಿಸಿರುವ ಪ್ರಾತ್ಯಕ್ಷಿಕೆಗಳ ಜೊತೆಗೆ ಹೆಚ್ಚುವರಿಯಾಗಿ ದ್ವಿದಳಧಾನ್ಯಗಳಲ್ಲಿ ಅಂತರ ಬೆಳೆ/ ಸುಧಾರಿತ ತಳಿಗಳ/ ಕೂರಿಗೆ ಬಿತ್ತನೆ / ಊರು ಬಿತ್ತನೆ (Dibbling) ಇತ್ಯಾದಿ ಕುರಿತಂತೆ 100 ಹೆಕ್ಟೇರ್ ಪ್ರದೇಶದ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ದ್ವಿದಳಧಾನ್ಯಗಳ ಉತ್ಪಾದನೆ ಮತ್ತು ತಾಂತ್ರಿಕತೆಗಳ ಬಗ್ಗೆ ಜ್ಞಾನ ಮತ್ತು ಪರಿಣಿತಿ ಇರುವಂತಹ ***ಸರ್ಕಾರೇತರ ಸಂಸ್ಥೆಗಳ*** ಮೂಲಕ ಏರ್ಪಡಿಸುವುದು. ಸದರಿ ಕಾರ್ಯಕ್ರಮವನ್ನು ಹಿಂಗಾರು ಹಂಗಾಮಿನಲ್ಲಿ ಕಡಲೆ ಬೆಳೆಯುವಂತಹ ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಚಿತ್ರದುರ್ಗ, ಧಾರವಾಡ, ಗುಲ್ಬರ್ಗಾ, ಗದಗ, ಕೊಪ್ಪಳ, ರಾಯಚೂರು ಮತ್ತು ಯಾದಗೀರ್ ಜಿಲ್ಲೆಗಳಲ್ಲಿ ಕೈಗೊಳ್ಳುವುದು. ಪ್ರತಿ ಹೆಕ್ಟೇರ್ ನಲ್ಲಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲು ರೂ.8250/–ಗಳನ್ನು ನಿಗದಿಪಡಿಸಲಾಗಿದ್ದು, ಘಟಕವಾರು ವಿವರಗಳು ಈ ಕೆಳಗಿನಂತಿವೆ:

| ಕ್ರ.ಸಂ | ಪರಿಕರ | ಪ್ರತಿ ಹೆಕ್ಟೇರ್‌ಗೆ ಅನುದಾನ (ರೂ.) |
|---|---|---|
| 1 | ಬಿತ್ತನೆ ಬೀಜ | 1500.00 |
| 2 | ಬೀಜೋಪಚಾರಕ್ಕಾಗಿ | 500.00 |
| 3 | ಕೂರಿಗೆ ಬಿತ್ತನೆ (Seed drill sowing)/ಊರು ಬಿತ್ತನೆ (Dibbling) ಕೈಗೊಳ್ಳಲು ರೈತರಿಗೆ ಪ್ರೋತ್ಸಾಹಧನ | 1500.00 |
| 4 | ಲಘುಪೋಷಕಾಂಶಗಳು | 1000.00 |
| 5 | ಕಳೆನಾಶಕ | 600.00 |
| 6 | ಸಮಗ್ರ ಪೀಡೆ ನಿರ್ವಹಣೆಗಾಗಿ | 600.00 |
| 7 | ಸಮುದಾಯ ಸಿಂಪರಣೆಗಾಗಿ(Community spraying) | 1000.00 |
| 8 | ಕ್ಷೇತ್ರೋತ್ಸವ | 250.00 |
| 9 | ಪ್ರಚಾರ ಸಾಮಗ್ರಿಯ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ವಿವರಣಾ ಫಲಕ | 250.00 |
| 10 | ವಿಜ್ಞಾನಿಗಳ/ಕೇಂದ್ರ ಸರ್ಕಾರದ ಅಧಿಕಾರಿಗಳ/ ಯೋಜನೆ ಉಸ್ತುವಾರಿ ತಂಡ / ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ | 300.00 |
| 11 | ಸರ್ಕಾರೇತರ ಸಂಸ್ಥೆಗಳಿಗೆ ಪ್ರೋತ್ಸಾಹಧನ | 750.00 |
| | **ಒಟ್ಟು** | **8250.00** |

## III. ಬಾಡಿಗೆ ಆಧಾರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಪಡೆಯಲು ಸಹಾಯಧನ:

ಸಣ್ಣ ಮತ್ತು ಅತಿಸಣ್ಣ ರೈತರು ಕೃಷಿ ಯಂತ್ರೋಪಕರಣಗಳನ್ನು ಖರೀದಿಸಿ ಬಳಸುವಲ್ಲಿ ಅಶಕ್ತರಾಗಿರುವುದರಿಂದ ಇಂತಹ ರೈತರಿಗೆ ಈ ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳಲು ಬಾಡಿಗೆ ಆಧಾರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ನೀಡಲು ***ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ ಸಹಾಯಧನವನ್ನು ನೀಡುವುದು. ಪ್ರತಿ ರೈತನಿಗೆ ಬಾಡಿಗೆ ಆಧಾರದಲ್ಲಿ ಯಂತ್ರೋಪಕರಣಗಳನ್ನು ಪಡೆಯಲು ಒಂದು ಹೆಕ್ಟೇರ್ ಪ್ರದೇಶಕ್ಕೆ*** ಮಾತ್ರ ಪ್ರೋತ್ಸಾಹಧನ ನೀಡುವುದು. ರೈತರು ಈ ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳಲು ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಂದ ಪಡೆದಿರುವುದನ್ನು ಖಾತರಿಪಡಿಸಿಕೊಂಡು, ಚಟುವಟಿಕೆಗಳಿಗೆ ನಿಗದಿಪಡಿಸಿರುವ ಅನುದಾನವನ್ನು ರೈತರ ಪರವಾಗಿ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ ಪಾವತಿಸುವುದು. ಸದರಿ ಕಾರ್ಯಕ್ರಮವು

***ಹಿಂಗಾರು ಹಂಗಾಮಿನಲ್ಲಿ ದ್ವಿದಳಧಾನ್ಯಗಳ ಉತ್ಪಾದನೆಯನ್ನು ಕೈಗೊಳ್ಳುವ ರೈತರಿಗೆ ಮಾತ್ರ*** ಅನ್ವಯಿಸುತ್ತದೆ ಹಾಗೂ ಸದರಿ ಕಾರ್ಯಕ್ರಮವನ್ನು ಹಿಂಗಾರು ಹಂಗಾಮಿನಲ್ಲಿ ಕಡಲೆ ಬೆಳೆಯವಂತಹ ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಚಿತ್ರದುರ್ಗ, ಧಾರವಾಡ, ಗುಲ್ಬರ್ಗಾ, ಗದಗ, ಕೊಪ್ಪಳ, ರಾಯಚೂರು ಮತ್ತು ಯಾದಗೀರ್ ಜಿಲ್ಲೆಗಳಲ್ಲಿ ಕೈಗೊಳ್ಳುವುದು.

| **ಕ್ರ.ಸಂ** | **ಚಟುವಟಿಕೆ** | **ಪ್ರತಿ ಹೆಕ್ಟೇರ್‌ಗೆ ಅನುದಾನ (ರೂ.)** |
|---|---|---|
| 1 | ಯಾಂತ್ರೀಕೃತ ಉಳುಮೆಗೆ ಬಾಡಿಗೆ | 300.00 |
| 2 | ರೋಟೋವೇಟರ್ ಬಳಕೆಗೆ ಬಾಡಿಗೆ | 300.00 |
| 3 | ಟ್ರ್ಯಾಕ್ಟರ್ ಮತ್ತು ಸೀಡ್ ಡ್ರಿಲ್ ಬಳಸಿ ಬಿತ್ತನೆ ಕೈಗೊಳ್ಳಲು ಬಾಡಿಗೆ | 900.00 |
| | ***ಒಟ್ಟು*** | ***1500.00*** |